ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**1124**
ಸದಸ್ಯರ ಹೆಸರು	:	ಡಾ॥ ಜೈಮಾಲ ರಾಮಚಂದ್ರ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	13-03-2020

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಪೋಷಣ ಅಭಿಯಾನ ಯೋಜನೆ ಚಾಲನೆಗೆ ಬಂದಿರುವುದು ಯಾವಾಗ;	ಕೇಂದ್ರ ಸರ್ಕಾರವು ಪೋಷಣ್ ಅಭಿಯಾನ ಯೋಜನೆಯನ್ನು 8ನೇ ಮಾರ್ಚ್ 2018ರಿಂದ ಚಾಲನೆ ನೀಡಿರುತ್ತದೆ. ಯೋಜನೆಯನ್ನು ಚಾಲನೆಗೊಳಿಸಲು ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಮಮಇ 20 ಐಸಿಡಿ 2018 ದಿನಾಂಕ:31.05.2018 (19 ಜಿಲ್ಲೆಗಳಿಗೆ) ಹಾಗೂ ಮಮಇ 74 ಐಸಿಡಿ 2019 ದಿನಾಂಕ:19.10.2019 (11 ಜಿಲ್ಲೆಗಳಿಗೆ) ಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.
ಆ.	ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ರಾಜ್ಯದ ಪಾಲು ಎಷ್ಟು; ಕೇಂದ್ರದ ಪಾಲುಗಳೆಷ್ಟು;	ಕೇಂದ್ರ ಸರ್ಕಾರದ ಪಾಲು : 60% ರಾಜ್ಯ ಸರ್ಕಾರದ ಪಾಲು : 40%
ಇ.	ಈ ಯೋಜನೆಯ ಪ್ರಯೋಜನಗಳೇನು;	**ಈ ಯೋಜನೆಯ ಉದ್ದೇಶಗಳು ಕೆಳಕಂಡಂತಿವೆ:** • ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯನ್ನು ಕಡಿಮೆಗೊಳಿಸುವುದು. • ಮಕ್ಕಳಲ್ಲಿನ ಅಪೌಷ್ಠಿಕತೆಯ (ಕಡಿಮೆ ತೂಕದ ಸರಾಸರಿ ಪ್ರಮಾಣ) ಕಡಿಮೆಗೊಳಿಸವುದು. • ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣ ಕಡಿಮೆಗೊಳಿಸುವುದು. • ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣವನ್ನು ಕಡಿಮೆಗೊಳಿಸುವುದು. • ಕಡಿಮೆ ತೂಕದ ಜನನಗಳ ಪ್ರಮಾಣವನ್ನು ಕಡಿಮೆಗೊಳಿಸುವುದು. ಈ ಮೇಲಿನ ಪ್ರಯೋಜನಗಳನ್ನು ಸಾಧಿಸಲು ಹಾಗೂ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಮುಂತಾದ ಹಕ್ಕುದಾರ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

		ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ಈಗಾಗಲೇ ಅಂಗನವಾಡಿಗಳಿಗೆ ಈ ಯೋಜನೆಯಡಿ ಹೊಸದಾಗಿ 4 ಬೆಳವಣಿಗೆ ಮಾಪಕಗಳಾದ ಸ್ಟೇಡಿಯೊ ಮೀಟರ್, ಇನಫ್ಯಾಂಟೊ ಮೀಟರ್, ತಾಯಿ ಮತ್ತು ಮಗುವಿನ ತೂಕದ ಯಂತ್ರ ಮತ್ತು ಮಗುವಿನ ತೂಕದ ಮಾಪಕಗಳನ್ನು 19 ಜಿಲ್ಲೆಗಳ ಅಂಗನವಾಡಿಗಳಿಗೆ ಈಗಾಗಲೇ ಪೂರೈಸಲಾಗಿದೆ. ಉಳಿದ 11 ಜಿಲ್ಲೆಗಳಿಗೆ ಪೂರೈಸಲು ಆದೇಶ ನೀಡಲಾಗಿದೆ. ರಾಜ್ಯದ 19 ಜಿಲ್ಲೆಗಳಿಗೆ ಸ್ಮಾರ್ಟ್‌ಫೋನ್ ಮತ್ತು ಪವರ್ ಬ್ಯಾಂಕ್‌ಗಳನ್ನು ಖರೀದಿಸಲು ಅದೇಶ ನೀಡಲಾಗಿದೆ. ಈಗ ಮಾರ್ಚ್ 8 ರಿಂದ 22ರವರೆಗೆ ರಾಜ್ಯಾದ್ಯಂತ ಪೋಷಣ ಪಕ್ವಾಡ ಕಾರ್ಯಕ್ರಮ ಸಂಘಟಿಸಿ, ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಸಾರ್ವಜನಿಕರು ಹಾಗೂ ಫಲಾನುಭವಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ.
ಈ	ಈ ಯೋಜನೆಯು ಸಮರ್ಪಕವಾಗಿ ಸಂಬಂಧ ಪಟ್ಟವರಿಗೆ ತಲುಪಿದೆಯೇ?	ಹೌದು

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ : ಮಮಇ 70 ಐಸಿಡಿ 2020